8	ಕೋಲಾರ–ಚಿಕ್ಕಬಳ್ಳಾಪುರ ಗೇಜ್ ಪರಿವರ್ತನೆ ಯೋಜನೆ.	425 91
9.	ತುಮಕೂರು–ದಾವಣಗೆರೆ ಹೊಸ ರೈಲು ಮಾರ್ಗ ಯೋಜನೆ.	0.45
10.	ಬಾಗಲ್‌ಕೋಟೆ–ಕುಡಚಿ ಹೊಸ ರೈಲು ಮಾರ್ಗ ಯೋಜನೆ	11 23
11.	ಶಿವಮೊಗ್ಗ–ಹರಿಹರ ಹೊಸ ರೈಲು ಮಾರ್ಗ ಯೋಜನೆ.	0.06
12.	ವೈಟ್‌ಫೀಲ್ಡ್–ಕೋಲಾರ ಹೊಸ ರೈಲು ಮಾರ್ಗ ಯೋಜನೆ.	0.17

ಇ– ಸ್ವತ್ತು ಯೋಜನೆ

(507)437; ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)

ಅ) ಗ್ರಾಮ ಪಂಚಾಯತಿಗಳಲ್ಲಿ ಇ–ಸ್ವತ್ತು ಯೋಜನೆಯ ಅನುಷ್ಠಾನದಿಂದ ಆಗುತ್ತಿರುವ ಅನಾನುಕೂಲಗಳು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಈ ಯೋಜನೆಯನ್ನು ಸರಳೀಕರಣಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಮಾನ್ಯ ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿನ ಅಧಿಕೃತ ಆಸ್ತಿಗಳಾದ **a)** ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ: ಸಂಖ್ಯೆ: ಆರ್‌ಡಿ 174 ಮನೋಮು 2005 ದಿನಾಂಕ:23–08–2005 ಮತ್ತು ಸುತ್ತೋಲೆ ಸಂಖ್ಯೆ.ಕಂಇ 146 ಎಎಸ್‌ಡಿ 2013 ದಿನಾಂಕ:14–06–2013 ರಂತೆ ತಹಶೀಲ್ದಾರ್ ರವರು ನಕಾಶೆಯೊಂದಿಗೆ ದೃಢೀಕರಿಸಿರುವ ಗ್ರಾಮ ರಾಣಾ

ವ್ಯಾಪ್ತಿಯೊಳಗಿರುವ ಆಸ್ತಿ/ನಿವೇಶನ **b)** ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ. ಹೆಚ್‌ಡಿ 55 ಹೆಚ್‌ಎಎಸ್ 2011, ದಿನಾಂಕ. 30 01 2012 ರಂತೆ ಸೃಜಿಸುವ ಆಸ್ತಿ ಮತ್ತು **c)** ಭೂ ಪರಿವರ್ತನೆಯಾದ ಜಮೀನಿನಲ್ಲಿ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯೊಂದಿಗೆ ಸೃಜಿಸಲಾದ ಆಸ್ತಿಗಳಿಗೆ **d)** ಫಾರಂ ಬಿಲ್ಡಿಂಗ್ / ಹೌಸ್ ಎಂದು ಪರಿಗಣಿಸುವ ಆಸ್ತಿಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ/ಕಂದಾಯ ಪರಿವೀಕ್ಷಕರಿಂದ ದೃಢೀಕರಣ ಪತ್ರವನ್ನು ಸಲ್ಲಿಸಿರುವಂತೆ ಆಸ್ತಿ. ಹಾಗೂ **e)** ಕರ್ನಾಟಕ ಭೂ ಕಂದಾಯ ಅಧಿನಿಯಮದ ಪ್ರಕರಣ 95 (2) ರನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ 9 ಮತ್ತು 11 ನ್ನು ನೀಡಬೇಕಾಗುತ್ತದೆ

ಆಸರೆ ಯೋಜನೆಯಲ್ಲಿ ಆಯ್ಕೆಯಾದ ಗ್ರಾಮಗಳು

302(512); ಶ್ರೀ ಭೂಸನೂರ್ ರಮೇಶ ಬಳಪ್ಪ (ಸಿಂಧಗಿ)

ಅ) ಆಸರೆ ಯೋಜನೆಯಲ್ಲಿ ಸಿಂಧಗಿ ಕ್ಷೇತ್ರದಲ್ಲಿ ಮನೆಗಳ ನಿರ್ಮಾಣಕ್ಕೆ ಆಯ್ಕೆಯಾದ ಗ್ರಾಮಗಳು ಯಾವುವು?

ಆ) ಮನೆಗಳು ನಿರ್ಮಾಣವಾಗಿದ್ದರೆ ಅಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ?

ಇ) ನಿರ್ಮಾಣವಾದ ವಸತಿಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆಯೇ, ಹಾಗಿದ್ದಲ್ಲಿ ಫಲಾನುಭವಿಗಳ ಪಟ್ಟಿಯನ್ನು ಒದಗಿಸುವುದು.